ಇ) ಈ ಯೋಜನೆಗೆ 1995-96ನೇ ಸಾಲಿಗೆ ಒದಗಿಸಿರುವ ಅನುದಾನ ರೂ . 750.00 ಲಕ್ಷ ಈ ಯೋಜನೆಯನ್ನು 2000ನೇ ಇಸವಿಯ ಒಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಈ) ಕೇಂದ್ರ ಸರ್ಕಾರದ ಮಂಜೂರಾತಿಯ ನಿರೀಕ್ಷೆಯಲ್ಲಿ ಈ ಯೋಜನೆಯ ಕಾರ್ಯಗಳನ್ನು ಪ್ರಾರಂಭಿಸಲಾಗಿದೆ.

ಶ್ರೀ ಸಿ.ಎಂ.ಉದಾಸಿ (ಶ್ರೀ ಶಿವಣ್ಣನವರ ಪರವಾಗಿ):- ಮಾನ್ಯ ಅಧ್ಯಕ್ಷರೇ, ಈ ಯೋಜನೆಯು 2000 ಇಸವಿಯೊಳಗಾಗಿ ಮುಗಿಸಬೇಕೆಂದು ಅವರು ಕೊಟ್ಟಿರುವ ಉತ್ತರದಲ್ಲಿ ಹೇಳಿದ್ದಾರೆ. ಆದರೆ 1995-96ನೇ ಸಾಲಿಗೆ ಕೇವಲ ಏಳೂವರೆ ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗಿದೆ ಎಂದು ಹೇಳಿದ್ದಾರೆ. ಈ ಯೋಜನೆಗೆ ಸುಮಾರು 200 ಕೋಟಿ ರೂಪಾಯಿಗಳಿಗಿಂತ ಹೆಚ್ಚಿಗೆ ಹಣಬೇಕಾಗಿದೆ. ಈ ಯೋಜನೆಯಿಂದ ಸುಮಾರು ಎರಡೂವರೆ ಲಕ್ಷ ಹೆಕ್ಟೇರ್ ಜಮೀನಿಗೆ ನೀರಾವರಿಯಾಗುವ ಯೋಜನೆ ಇರುವುದರಿಂದ ಸರ್ಕಾರ ಇದಕ್ಕೆ ಹೆಚ್ಚಿಗೆ ಹಣವನ್ನು ಏನಾದರೂ ಬಿಡುಗಡೆ ಮಾಡಲು ಬಯಸುತ್ತದೆಯೇ? ಈ ಯೋಜನೆಯನ್ನು 2000 ಇಸವಿಯೊಳಗೆ ಬಗೆಹರಿಸಬೇಕೆಂದರೆ ಪ್ರತಿ ವರ್ಷ ಏಳೂವರೆ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತಾ ಹೋದರೆ ಸಂಪೂರ್ಣ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವುದನ್ನು ತಮ್ಮ ಮುಖೇನ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿವರಗಳನ್ನು ಕೇಳಬಯಸುತ್ತೇನೆ.

ಶ್ರೀ ಹೆಚ್.ಡಿ.ದೇವೇಗೌಡ:- ಸನ್ಮಾನ್ಯ ಅಧ್ಯಕ್ಷರೇ, ಗೌರವಾನ್ವಿತ ಸದಸ್ಯರ ಮನಸ್ಸಿನಲ್ಲಿರುವಂಥ ಕಳಕಳಿಯನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ಈ ಯೋಜನೆಗೆ 1991ರಲ್ಲಿ 271 ಕೋಟಿ 41 ಲಕ್ಷಕ್ಕೆ ಮಂಜೂರಾತಿಯನ್ನು ಕೊಟ್ಟಿದ್ದಾರೆ. ಆದರೆ ಇಲ್ಲಿಯವರೆಗೆ ಖರ್ಚಾಗಿರುವ ಹಣ 379 ಕೋಟಿ ಆಗುತ್ತದೆ ಪುನಃ ರಿವೈಜ್ಡ್ ಎಸ್ಟಿಮೆಟ್ ಸಿಬ್ಬಂದಿ ವೆಚ್ಚಕ್ಕಾಗಿ 246 ಲಕ್ಷ ರೂಗಳು ಖರ್ಚಾಗಿದೆ. ಈ ಪೈಕಿ ಕಾಮಗಾರಿಗಳಿಗೆ ಮಾಡಿದಂಥ ವೆಚ್ಚ 335ಲಕ್ಷ ರೂ.ಗಳು ಒಟ್ಟು 587ಲಕ್ಷ ರೂ.ಗಳು. ಈ ವರ್ಷ 750 ಕೋಟಿ ರೂ.ಗಳನ್ನು ಇಟ್ಟಿದ್ದೇವೆ. 1991ರಿಂದ ಏನು ಖರ್ಚಾಗಿದೆ ಎಂದರೆ 587ಲಕ್ಷ ರೂ.ಗಳು. ಅಲ್ಲಿ ಕ್ವಾರ್ಟರ್ಸ್ ಮತ್ತೊಂದು ಕಟ್ಟುವುದಕ್ಕೆ 335ಲಕ್ಷ ರೂ.ಗಳು. ಈ ವರ್ಷ 750ಲಕ್ಷ ಇಟ್ಟಿದ್ದೇವೆ. ಇಷ್ಟು ಮಾತ್ರಕ್ಕೆ ನಮಗೆ ತೃಪ್ತಿ ಇದೆ ಎಂದು ಅರ್ಥವಲ್ಲ. ಇದಕ್ಕೆ ಅನುದಾನವನ್ನು ಹೆಚ್ಚು ಮಾಡಿಕೊಳ್ಳಬೇಕಾಗುತ್ತದೆ. ಅನುದಾನವನ್ನು ಹೆಚ್ಚು ಮಾಡಿಕೊಳ್ಳುವುದಕ್ಕೆ ಸರ್ಕಾರದ ಸಂಪನ್ಮೂಲಗಳನ್ನು ಅವಲಂಬಿಸಬೇಕಾಗುತ್ತದೆ. ಆದಕ್ಕೆ ನಾನು ರೀತಿಯ ಪ್ರಯತ್ನವನ್ನು ಮಾಡುತ್ತಿದ್ದೇವೆ. ತಾವು ಹೇಳಿದಂತಹ ವಿಷಯವನ್ನು ಗಮನದಲ್ಲಿಟ್ಟಕೊಂಡು ಸ್ವಲ್ಪ ಹಣವನ್ನು ಹೆಚ್ಚು ತೊಡಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಸಿ.ಎಂ.ಉದಾಸಿ:- 2000 ಇಸವಿಯೊಳಗೆ ಮುಗಿಸಬೇಕೆಂದು ಹೇಳುವುದಾದರೆ, ಕನಿಷ್ಟ ವರ್ಷಕ್ಕೆ 50-60 ಕೋಟಿ ರೂಪಾಯಿಗಳನ್ನು ಒದಗಿಸಬೇಕಾಗುತ್ತದೆ. ಈ ಯೋಜನೆಯು ಬಹಳ ಮಹತ್ವದ್ದಾಗಿರುವುದರಿಂದ ತೀವ್ರ ಗಮನ ಹರಿಸಿ ಈ ವರ್ಷಕ್ಕೆ 50 ಕೋಟಿ ರೂಪಾಯಿಗಳಷ್ಟು ಹಣವನ್ನು ಬಿಡುಗಡೆ ಮಾಡುತ್ತಾರೆ ಎಂದು ಅಂದುಕೊಂಡಿದ್ದೇನೆ.

ಶ್ರೀ ಹೆಚ್.ಡಿ.ದೇವೇಗೌಡ:- ಸನ್ಮಾನ್ಯ ಅಧ್ಯಕ್ಷರೇ, ಇವರು ಹೇಳಿದಂತಹ ಅಂಶಗಳನ್ನು ಗಮನದಲ್ಲಿಟ್ಟುಕೊಂಡಿದ್ದೇನೆ.

ವಿಷಯ:- ಅರ್ಕಾವತಿ ಯೋಜನೆಗಾಗಿ ಮಾಡಲಾದ ವೆಚ್ಚ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 225 (1544)

ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು):- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1991 ರಿಂದ 1995 ಮಾರ್ಚ್‌ವರೆವಿಗೂ ಕನಕಪುರ ತಾಲ್ಲೂಕಿನ ಹಾರೋ ಬೆಲೆಯಲ್ಲಿ ನಡೆಯುತ್ತಿರುವ ಅರ್ಕಾವತಿ ಜಲಾನಯನ ಯೋಜನೆಯ ಮೇಲೆ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ ಹಾಗೂ ಏಪ್ರಿಲ್ 95 ರಿಂದ ಜೂನ್ 95ರವರೆವಿಗೂ ಎಷ್ಟು ಹಣ ವೆಚ್ಚ ಮಾಡಲಾಗಿದೆ.

ಆ)ಅರ್ಕಾವತಿ ಯೋಜನೆಯಿಂದ ರೈತರಿಗೆ ಯಾವಾಗ ವ್ಯವಸಾಯಕ್ಕಾಗಿ ನೀರು ಬಿಡುಗಡೆ ಮಾಡಲು ಪ್ರಾರಂಭಿಸಲಾಗುವುದು?

ಶ್ರೀ ಹೆಚ್. ಡಿ.ದೇವೇಗೌಡ (ಮುಖ್ಯಮಂತ್ರಿಗಳು):-

ಅ) 1991 ರಿಂದ 1995 ಮಾರ್ಚ್‌ವರೆಗೆ ರೂ.2247.21 ಲಕ್ಷಗಳು ವೆಚ್ಚ ಮಾಡಲಾಗಿದೆ. ಏಪ್ರಿಲ್ 95 ರಿಂದ ಜೂನ್ 95 ರವರೆಗೆ ರೂ. 34.05 ಲಕ್ಷಗಳ ವೆಚ್ಚ ಮಾಡಲಾಗಿದೆ.

ಆ) 1997 ಜೂನ್ ತಿಂಗಳಿಂದ ಹಂತ ಹಂತವಾಗಿ ನೀರಾವರಿ ಸೌಲಭ್ಯ ಒದಗಿಸಲು ಯೋಜಿಸಲಾಗಿದೆ.

ಶ್ರೀ ಡಿ.ಕೆ.ಶಿವಕುಮಾರ್:- ಮಾನ್ಯ ಅಧ್ಯಕ್ಷರೇ, ನಮ್ಮ ಕ್ಷೇತ್ರದಲ್ಲಿ ಏನು ಅರ್ಕಾವತಿ ಜಲಾಶಯ ಯೋಜನೆ ಇದೆ, ಮುಖ್ಯ ಮಂತ್ರಿಗಳು ಹಿಂದೆ ನೀರಾವರಿ ಸಚಿವರಾಗಿದ್ದಾಗ ಬೇಕಾದಷ್ಟು ಸಂದರ್ಭದಲ್ಲಿ ಭೇಟಿಯನ್ನು ಕೊಟ್ಟಿದ್ದಾರೆ. ಮೊನ್ನೆ ಕೂಡ ಕಳೆದ ತಿಂಗಳಿನಲ್ಲಿ ಬರುತ್ತೇನೆ ಎಂದು ಹೇಳಿದ್ದರು ಆದರೆ ಬರಲಿಲ್ಲ. ಆದರೆ ಈ ವರ್ಷ 15 ಕೋಟಿ ರೂಗಳಷ್ಟು ಹಣವನ್ನು ಈ ಯೋಜನೆಗೆ ಕಾಯ್ದಿರಿಸಲಾಗಿದೆ. ಮೂರು ತಿಂಗಳಿನಲ್ಲಿ ಬರೀ 34 ಲಕ್ಷ ರೂಗಳು ಮಾತ್ರ ಖರ್ಚಾಗಿದೆ. ಇಲ್ಲಿ ಉತ್ತರದಲ್ಲಿ ಜೂನ್ 1997ರಲ್ಲಿ ನೀರನ್ನು ಕೊಡುತ್ತೇವೆಂಬ ಒಂದು ಸಮಾಧಾನದ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಈಗ ನಡೆಯುತ್ತಿರುವ ವೇಗವನ್ನು ನೋಡಿದರೆ ಬಹುಶಃ 2000 ಇಸವಿಗೊ ನೀರನ್ನು ಕೊಡಲಿಕ್ಕೆ ಸಾಧ್ಯವಿಲ್ಲ. ಆದುದರಿಂದ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಏನು ಮನವಿ ಮಾಡಿಕೊಳ್ಳುತ್ತೇನೆಂದರೆ ಆದಷ್ಟು ಜರೂರಾಗಿ ರಿಹ್ಯಾಬಿಲಿಟೇಷನ್ ಬಗ್ಗೆ ವ್ಯವಸ್ಥೆ ಮಾಡಬೇಕು. ಕಳೆದ 5 ವರ್ಷಗಳಲ್ಲಿ, ಹಿಂದೆ ಇದ್ದಂತಹ ಸರ್ಕಾರದಲ್ಲೂ ಒಂದು ರಿಹ್ಯಾಬಿಲಿಟೇಷನ್ ಕಮಿಟಿ ಆಗಿಲ್ಲ, ಆ ಕಮಿಟಿಯವರು ಕುಳಿತುಕೊಂಡು ಚರ್ಚೆ ಮಾಡಿ ಅಲ್ಲಿ ಇರತಕ್ಕಂತಹ ರೈತರನ್ನು ಶಿಫ್ಟ್ ಮಾಡಲಿಕ್ಕೆ ಯಾವುದೇ ಕಾರ್ಯಕ್ರಮವನ್ನು ಹಾಕಿಕೊಳ್ಳಲಿಲ್ಲ. ಅವರಿಗೆ ಪುನರ್ ವಸತಿ ಒದಗಿಸಿಕೊಡುವಂತಹ ಯಾವುದೇ ಕೆಲಸವು ಆಗಿಲ್ಲ. ಅದಕ್ಕೋಸ್ಕರ ಮೊದಲು ಅವರುಗಳನ್ನು ಶಿಫ್ಟ್ ಮಾಡಿ ಮತ್ತು ಈ ವರ್ಷ ಏನು ಹಣವನ್ನು ನಿಗದಿ ಮಾಡಿದ್ದೇವೆಯೋ ಆ ಹಣವನ್ನು ಆದಷ್ಟು ಬೇಗ ಜರೂರಾಗಿ ಆ ಹಣವನ್ನು ಬಿಡುಗಡೆ ಮಾಡಿ, ಸಿಮೆಂಟ್ ಇಲ್ಲ, ಕಬ್ಬಿಣ ಇಲ್ಲ, ಕಂಟ್ರಾಕ್ಟರ್‌ಗೆ ಅಲ್ಲಿ ತೊಂದರೆ ಇದೆ. ಈಗ ಅಲ್ಲಿ ನಡೆಯುತ್ತಿರುವಂಥ ಸಣ್ಣ ಪುಟ್ಟ ಕೆಲಸ ಏನಿವೆ ಅವು ಕೂಡ ನಿಂತುಹೋಗಿದೆ. ಟೆಂಡರ್ ಕೆಲಸ ಒಂದನ್ನು ಬಿಟ್ಟರೆ ಮಿಕ್ಕ ಎಲ್ಲಾ ಕೆಲಸ ನಿಂತು ಹೋಗಿದೆ. ಕಾಡು ಯಾವ ರೀತಿಯಲ್ಲಿದೆ ಆ ರೀತಿಯಲ್ಲಿ ಅಲ್ಲಿ ತೋರುವಂತಹ ಒಂದು ಪರಿಸ್ಥಿತಿ ಇದೆ. ಆದ್ದರಿಂದ ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಗಮನ ಹರಿಸಿ ಜರೂರಾಗಿ ಇರುವ ಹಣವನ್ನೆಲ್ಲ ಬಿಡುಗಡೆ ಮಾಡಿ, ಕೆಲಸ ಪ್ರಾರಂಭಿಸುವಂತಹ ಕೆಲಸವನ್ನು ಮಾಡಬೇಕೆಂದು ಹೇಳಿ ಮಾನ್ಯ ಮುಖ್ಯ ಮಂತ್ರಿಗಳಲ್ಲಿ

ಮನವಿಯನ್ನು ಮಾಡಿಕೊಳ್ಳುತ್ತೇನೆ ಮತ್ತು ಮಿಕ್ಕ ಹಣವನ್ನು ಯಾವಾಗ ಬಿಡುಗಡೆ ಮಾಡುತ್ತೀರಿ? ಎಷ್ಟು ಹೆಚ್ಚುವರಿ ಹಣವನ್ನು ಸರ್ಕಾರದಿಂದ ಕೊಡಲಿಕ್ಕೆ ಆಗುತ್ತದೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

12.10 ಪಿ.ಎಂ

ಶ್ರೀ ಹೆಚ್.ಡಿ.ದೇವೇಗೌಡ:- ಈ ಕೆಲಸ ನಡೆಯುತ್ತಿದೆ. ಅದನ್ನು ನಿಲ್ಲಿಸತಕ್ಕ ಪ್ರಶ್ನೆ ಇಲ್ಲ. ಅದು 1984-85ನೇ ಸಾಲಿನಲ್ಲಿ ಪ್ರಾರಂಭವಾಗಿತ್ತು. ಈ ಕೆಲಸ 1972 ರಲ್ಲಿ ದುಷ್ಕಾಲ ಕಾಮಗಾರಿಯಲ್ಲಿ ದೇವರಾಜು ಅರಸು ಅವರು ಅಂದಾಜು ಮಂಜೂರಾತಿ ಇಲ್ಲದೆ 25-30 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದರು. ಅದಕ್ಕೆ ಎಸ್ಟಿಮೇಟ್ ಕೂಡ ಇಲ್ಲ. 1984-85 ರಲ್ಲಿ ನಾನು ಸ್ಥಳ ಪರಿಶೀಲನೆ ಮಾಡಿ ಅದಕ್ಕೆ ಪುನಃ ಎಲ್ಲಾ ಎಸ್ಟಿಮೇಟಿಗೆ ಟೆಕ್ನಿಕಲಿ, ಫೈನಾನ್ಶಿಯಲಿ, ಫೀಸಿಬಿಲಿಟಿ ಇದೆಯೇ ಎಂದು ಎಕ್ಸಾಮಿನ್ ಮಾಡಿಸಿ ಮಂಜೂರಾತಿ ಕೊಟ್ಟದ್ದುದು ನಾವೆ. ಅವರು ಹೇಳಿದ ಹಾಗೆ ನಾನು ನಾಲ್ಕಾರು ಸಾರಿ ಹೋಗಿದ್ದೇನೆ. ಈಗಾಗಲೇ 2247 ಲಕ್ಷ ರೂಪಾಯಿ ಹಣ ಖರ್ಚಾಗಿದೆ. ಇವತ್ತು ಬಹುತೇಕ ಕೆಲಸಗಳು ಮುಗಿದಿದ್ದೆ. ಜಲಾಶಯದ ಎಂಬ್ಯಾಂಕಮೆಂಟ್ ಕೆಲಸಗಳು ಮುಗಿದಿವೆ. ಕಾಂಕ್ರೀಟ್ ಡ್ಯಾಂ ಕೆಲಸಗಳು ಪ್ರಗತಿಯಲ್ಲಿವೆ. ಫಾಲ್ಸ್ ಜೋನ್ ಕಾಮಗಾರಿಗಳು ಮುಗಿದಿವೆ. ಡ್ಯಾಂ ಕೆಲಸಗಳು ಪ್ರಗತಿಯಲ್ಲಿವೆ. ಕಾಲುವೆ ಕೆಲಸಗಳು ಪ್ರಗತಿಯಲ್ಲಿವೆ. ಇದು ಇರತಕ್ಕ ವಾಸ್ತವಾಂಶ. ಗೇಟ್ ಇನ್ಸ್ಟಾಲ್ ಮಾಡುವುದಕ್ಕೆ. ಗೇಟ್ಸ್ಮಾಡುವುದಕ್ಕೆ ಈಗಾಗಲೇ ನಾವು ಟೆಂಡರ್ ಕರೆದಿದ್ದೇವೆ ಮತ್ತು ಟೆಂಡರ್ಗೆ ಒಪ್ಪಿಗೆ ಕೂಡ ಕೊಟ್ಟಿದ್ದೇವೆ. ಆದುದರಿಂದ ತಾವು ಏನು ಹೇಳಿದ್ದೀರಿ ಆ ಎಲ್ಲಾ ಕೆಲಸಗಳನ್ನು ತ್ವರಿತ ವೇಗದಲ್ಲಿ ಮುಗಿಸುವುದಕ್ಕೆ ಮತ್ತು ಬಜೆಟ್ನಲ್ಲಿರತಕ್ಕ ಹಣವನ್ನು ಖರ್ಚು ಮಾಡುವುದಕ್ಕೆ ಸರ್ಕಾರ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳುತ್ತವೆ.

ವಿಷಯ:- ಅಬಕಾರಿ ಗುತ್ತಿಗೆ ಪರವಾನಗಿ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 90 (1153)

ಶ್ರೀ ಮಂಜುನಾಥ. ಸಿ.ಕುನ್ನೂರ (ಶಿಗ್ಗಾಂವ):- ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ)ರಾಜ್ಯದ ವಿವಿಧ ತಾಲ್ಲೂಕುಗಳಲ್ಲಿ ಅಬಕಾರಿ ಗುತ್ತಿಗೆಯನ್ನು ಗುತ್ತಿಗೆ ಆಧಾರದ ಮೇಲೆ ಪರವಾನಗಿಯನ್ನು ನೀಡಲಾಗಿರುವವುಗಳೆಷ್ಟು?

ಆ)ಹಾಗಿದ್ದಲ್ಲಿ, ಎಷ್ಟು ಹಣಕ್ಕೆ ಗುತ್ತಿಗೆ ನೀಡಲಾಗಿದೆ.(ಪ್ರತಿ ತಾಲ್ಲೂಕಿನ

ಗುತ್ತಿಗೆದಾರರ ಹೆಸರುಗಳನ್ನು ತಿಳಿಸುವುದು)

ಇ)ರಾಜ್ಯದಲ್ಲಿ ಸಾರಾಯಿ ಮಾರಾಟ ಹಾಗೂ ಇತರೇ ಅಬಕಾರಿ ಬಾಬತ್ತಿನಿಂದ ಎಷ್ಟು ಆದಾಯ ಸರ್ಕಾರಕ್ಕೆ ಬಂದಿದೆ?

ಈ)ಅಬಕಾರಿ ಗುತ್ತಿಗೆದಾರರಿಂದ ಸರ್ಕಾರಕ್ಕೆ ಬರಬೇಕಾಗಿರುವ ಬಾಕಿ ಹಣವೆಷ್ಟು? ಯಾರಿಂದ ಬರಬೇಕಾಗಿದೆ?

ಉ)ಈ ಹಣವನ್ನು ವಸೂಲಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ. ತಿಪ್ಪೇಸ್ವಾಮಿ (ಅಬಕಾರಿ ಸಚಿವರು):-

ಅ) ರಾಜ್ಯದ 174 ತಾಲ್ಲೂಕುಗಳಿಗೆ ಸ್ಥಿರೀಕರಣ ಆದೇಶಗಳನ್ನು ನೀಡಲಾಗಿದೆ. ಒಂದು